<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No: 128/2019**

CW : 5 PW: 3

| | | |
|---|---|---|
| ಹೆಸರು | : | ಸಂಗಮೇಶ |
| ತಂದೆಯ ಹೆಸರು | : | ಶಾಂತಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ಸ್ಥಳ | : | ಜೇವರ್ಗಿ |

**(ದಿನಾಂಕ: 31-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

<u>**ಮುಖ್ಯ ವಿಚಾರಣೆ: ಸ.ಸ.ಅ ರವರಿಂದಃ**</u>

ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಅಕ್ಕನ ಮಗಳು, ಚಾಸಾ-6 ನನ್ನ ಅಕ್ಕ, ಚಾಸಾ-4 ಮತ್ತು 7 ರವರ ಪರಿಚಯ ಇರುತ್ತದೆ. ದಿ: 05/04/2010 ರಂದು ಚಾಸಾ-1 ರವರ ಮದುವೆ ಮರತೂರು ಅಣವೀರಭದ್ರೇಶ್ವರ ದೇವಸ್ಥಾನದಲ್ಲಿ ಆರೋಪಿ ನಂ.1 ರವರೊಂದಿಗೆ ಆಗಿರುತ್ತದೆ. ಮದುವೆಯ ಕಾಲಕ್ಕೆ ವರನಿಗೆ ರೂ.100000/- ಗಳ ಸಾಮಾನುಗಳು, ಆರು ತೊಲೆ ಬಂಗಾರ ಕೊಟ್ಟಿದ್ದು ಇರುತ್ತದೆ. ನಾಲ್ಕು ತಿಂಗಳು ಸರಿಯಾಗಿ ಇದ್ದು ನಂತರ ಆರೋಪಿ ನಂ.3 ರಿಂದ 5 ರವರು ಕಿರಿಕಿರಿ ಶುರು ಮಾಡಿರುತ್ತಾರೆ. ನಂತರ ನಾನು ಹಾಗೂ ನನ್ನ ಅಕ್ಕ ಮರತೂರಿಗೆ ಹೋಗಿ ಪಂಚಾಯತಿ ಮಾಡಿ ಸರಿಯಾಗಿ ನೋಡಿಕೊಳ್ಳುವಂತೆ ಹೇಳಿ ಬಂದಿರುತ್ತೇವೆ. ದಿ: 02/04/2018 ರಂದು ನಾವು ಹೋಗಿರುತ್ತೇವೆ. ಆದರೂ ಸಹ ಕಿರಿಕಿರಿ ಮಾಡಿರುತ್ತಾರೆ. ಕಲಬುರಗಿ ನ್ಯಾಯಾಲಯದಲ್ಲಿ ಒಪ್ಪಿಕೊಂಡು ಚಾಸಾ-1 ರವರನ್ನು ಆರೋಪಿ ನಂ.1 ರವರು ಕರೆದುಕೊಂಡು ಹೋಗಿರುತ್ತಾರೆ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಚಾಸಾ-1 ರವರು ಫಿರ್ಯಾದಿ ಸಲ್ಲಿಸಿರುತ್ತಾರೆ. ಇಷ್ಟನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

<u>**ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ**</u>

ಮದುವೆಯ ಕಾಲಕ್ಕೆ ರೂ.60,000/-ಗಳು ನಗದು ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಚಾಸಾ-1 ರವರ ನಾದಿನಿಯರಾದ ಆರೋಪಿ ನಂ.3 ಮತ್ತು 4 ರವರು ಅಡುಗೆ ಮಾಡಲು ಬರುವುದಿಲ್ಲ ಅಂತ ಮತ್ತು ಆರೋಪಿ ನಂ.2 ಮತ್ತು 5 ರವರು 4 ತೊಲೆ ಬಂಗಾರ ತರುವಂತೆ ಹೇಳಿ ತೊಂದರೆ ಕೊಡುತ್ತಿದ್ದು ಅವರ ಮಾತು ಕೇಳಿ ಚಾಸಾ-1 ರವರ ಗಂಡ ಆರೋಪಿ ನಂ.1 ಇವರು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟು ಹೊಡೆಯುತ್ತಿದ್ದನು ಅಂತ ಗೊತ್ತಾಗಿ ನಾನು, ಚಾಸಾ-4, 6 ಎಲ್ಲರೂ ಕೂಡಿ ಮರತೂರು ಗ್ರಾಮಕ್ಕೆ ಹೋಗಿ ಚಾಸಾ-1

ರವರನ್ನು ಸರಿಯಾಗಿ ನೋಡಿಕೊಳ್ಳುವಂತೆ ಪಂಚಾಯತಿ ಮಾಡಿ ಬಂದಿರುತ್ತೇವೆ ಎಂದರೆ ಸರಿ. ನಂತರ ಅವಳಿಗೆ ಆರೋಪಿತರು ಮಾನಸಿಕ ದೈಹಿಕ ಕಿರುಕುಳ ನೀಡಿದ್ದರಿಂದ ಅವಳು ಬೆಸತ್ತು ತವರು ಮನೆಗೆ ಬಂದಿರುತ್ತಾಳೆ ಎಂದರೆ ಸರಿ. ದಿ: 26/01/2019 ರಂದು ಬೆಳಿಗ್ಗೆ 9 ಗಂಟೆಗೆ ಚಾಸಾ-1 ಮತ್ತು 6 ರವರು ಮರತೂರು ಗ್ರಾಮಕ್ಕೆ ಹೋಗಿ ಆರೋಪಿ ನಂ.1 ಇತನು ಎರಡನೇ ಮದುವೆ ಆಗಿರುವ ಬಗ್ಗೆ ಆರೋಪಿ ನಂ.1 ರವರಿಗೆ ವಿಚಾರಿಸಿದಾಗ ಚಾಸಾ-1 ರವರನ್ನು ಅವಾಚ್ಯ ಶಬ್ಧಗಳಿಂದ ಬೈದು ಏನು ಮಾಡಕೋತಿ ಮಾಡಕೋ ನಾ ಮನಸ್ಸು ಮಾಡಿದರೆ 10 ಮದುವೆ ಆಗುತ್ತೇನೆ ಅಂತ ದಬ್ಬಿಸಿಕೊಂಡು ಹೋಗಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲು: ಶ್ರೀ ಬಿ.ಎಸ್.ಎಮ್. ಆರೋಪಿ ಪರ ವಕೀಲರಿಂದಃ</u>

ಚಾಸಾ-1 ನನ್ನ ಅಕ್ಕನ ಮಗಳು. ಮದುವೆಯ ಕಾಲಕ್ಕೆ ವರನಿಗೆ ರೂ.100000/- ಗಳ ಸಾಮಾನುಗಳು, ಆರು ತೊಲೆ ಬಂಗಾರ ಹಾಗೂ ರೂ.60,000/-ಗಳು ನಗದು ಹಣ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಕೊಡುವುದು ತೊಗುವುದು ದೇವಸ್ಥಾನದಲ್ಲಿಯೇ ಆಗಿರುತ್ತದೆ. ಚಾಸಾ-1 ಮತ್ತು ಆರೋಪಿ ನಂ.1 ರವರ ಮದುವೆಯಾಗಿ ಈಗ ಅಂದಾಜು 12 ರಿಂದ 13 ವರ್ಷಗಳು ಆಗಿರುತ್ತವೆ. ಚಾಸಾ-1 ರವರಿಗೆ ಮದುವೆಯಾದ ನಾಲ್ಕು ತಿಂಗಳಿನಲ್ಲಿಯೇ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ನನಗೆ ಚಾಸಾ-1 ಮತ್ತು ಅವಳ ತಾಯಿ ಹೇಳಿರುತ್ತಾರೆ. ಆಗಲೇ ಯಾಕೆ ಫಿರ್ಯಾದಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಿರಿಯರಲ್ಲಿ ಮಾತು ಕತೆ ಆಗುವುದು ಇರುತ್ತದೆ ಎಂದು ಹೇಳುತ್ತಾರೆ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ಮತ್ತು ಅವಳ ತಾಯಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನಂ.1 ಜೆಸ್ಕಾಂ ಕಂಪನಿಯಲ್ಲಿ ಕ್ಯಾಷಿಯರ್ ಅಂತ ಕೆಲಸ ಮಾಡುತ್ತಾರೆ ಎಂದರೆ ಸರಿ. ಆತನಿಗೆ ರೂ.1,50,000/- ಪ್ರತಿ ತಿಂಗಳಿಗೆ ಸಂಬಳ ಇರುತ್ತದೆ ಎಂದರೆ ಸರಿ. ಆರೋಪಿ ನಂ.1 ರವರಿಂದ ಹಣವನ್ನು ಕೀಳುವ ಉದ್ದೇಶ ಸಲುವಾಗಿ ಚಾಸಾ-1 ಮತ್ತು 6 ರವರಿಂದ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.3 ಮತ್ತು 4 ರವರ ಮದುವೆ ಆರೋಪಿ ನಂ.1 ರವರ ಮದುವೆಗಿಂತ ಮೊದಲು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ನಂ.3 ಮತ್ತು 4 ರವರು ಮದುವೆಯಾದಾಗಿನಿಂದ ಗಂಡನ ಮನೆಯಲ್ಲಿ ಇರುವುದರಿಂದ ಸದರಿ ಪ್ರಕರಣಕ್ಕೂ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ

ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಅದನ್ನು ನಾನು ನೋಡಿರುತ್ತೇನೆ. ನಾನು, ಚಾಸಾ-4 ಮತ್ತು 6 ರವರು ಆರೋಪಿತರೊಂದಿಗೆ ಪಂಚಾಯತಿ ಮಾಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಾಗೂ ಚಾಸಾ-6 ರವರ ಮನೆಯ ನಡುವೆ 32 ಕಿ.ಮೀ ಅಂತರ ಇರುತ್ತದೆ. ಸದರಿ ಸಂಗತಿಯು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಫೋನ್ ಮುಖಾಂತರ ತಿಳಿಸಿದ ನಂತರ ಹೋಗಿ ಕೇಳಿ ಗೊತ್ತಾದ ಬಗ್ಗೆ ನುಡಿಯುತ್ತಾರೆ. ಆರೋಪಿ ನಂ.1 ರವರಿಗೆ ಸಾಕಷ್ಟು ಸಂಬಳ ಇರುವ ಕಾರಣ ಚಾಸಾ-1 ರವರಿಂದ ಹಣ ತೆಗೆದುಕೊಂಡು ಬರುವಂತೆ ಹೇಳಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನಂ.1 ರವರು ಎರಡನೇ ಮದುವೆ ಮಾಡಿಕೊಂಡಿರುತ್ತಾರೆ ಅಂತ ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿತನೇ 10 ಮದುವೆ ಮಾಡಿಕೊಳ್ಳುತ್ತಾನೆ ಅಂತ ಹೇಳಿದ ಬಗ್ಗೆ ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರವರಿಂದ ಹಣ ಕೀಳುವ ಉದ್ದೇಶಕ್ಕಾಗಿ ಚಾಸಾ-1 ರವರಿಂದ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**

ಸಿವಿಲ್ ನ್ಯಾಯಾಧೀಶರು, ಶಹಬಾದ.